# ಮೈಸೂರು ವಿಶ್ವವಿದ್ಯಾನಿಲಯ

**ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ವಿಶ್ವವಿದ್ಯಾನಿಲಯದ 102ನೇ ವಾರ್ಷಿಕ ಘಟಿಕೋತ್ಸವದ ಪ್ರಯುಕ್ತ ದಿನಾಂಕ: 19-03-2022 ರಂದು ಅಪರಾಹ್ನ 1.00 ಗಂಟೆಗೆ ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ನಡವಳಿಗಳು**

**ಹಾಜರಿದ್ದ ಸದಸ್ಯರುಗಳು:**

| | | |
|---|---|---|
| 1) | ಪ್ರೊ. ಜಿ.ಹೇಮಂತಕುಮಾರ್ | ಕುಲಪತಿಗಳು ಹಾಗೂ ಅಧ್ಯಕ್ಷರು |
| 2) | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ಇವರ ಪರವಾಗಿ ಶ್ರೀ ಕೆ.ಸಿ ವೀರಭದ್ರಯ್ಯ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮೈಸೂರು. | ಸದಸ್ಯರು |
| 3) | ಪ್ರೊ. ಜಿ.ವೆಂಕಟೇಶ್ ಕುಮಾರ್ | ಸದಸ್ಯರು |
| 4) | ಪ್ರೊ. ರಮೇಶ್ | ಸದಸ್ಯರು |
| 5) | ಶ್ರೀ ಎಂ.ಬಿ. ಗಪ್ಪಣ್ಣ | ಸದಸ್ಯರು |
| 6) | ಡಾ. ಚೈತ್ರ ನಾರಾಯಣ | ಸದಸ್ಯರು |
| 7) | ಡಾ. ವೆಂಕಟೇಶಯ್ಯ | ಸದಸ್ಯರು |
| 8) | ಡಾ. ನಾಗರಾಜು | ಸದಸ್ಯರು |
| 9) | ಡಾ. ಗೋವಿಂದರಾಜು | ಸದಸ್ಯರು |
| 10) | ಡಾ. ಕೆ.ವಿ.ಸುರೇಶ | ಸದಸ್ಯರು |
| 11) | ಶ್ರೀ. ಆರ್.ಪ್ರದೀಪ್ ಕುಮಾರ್ ದೀಕ್ಷಿತ್ | ಸದಸ್ಯರು |
| 12) | ಶ್ರೀ ಎಸ್.ಡಿ.ದೊಡ್ಡಚಾರಿ | ಸದಸ್ಯರು |
| 13) | ಶ್ರೀಮತಿ ವೈ.ಕೆ.ಪವಿತ್ರ | ಸದಸ್ಯರು |
| 14) | ಡಾ. ಎಂ.ಎಸ್.ದಾಮೋಧರ | ಸದಸ್ಯರು |
| 15) | ಪ್ರೊ. ಎ.ಪಿ.ಜ್ಞಾನ ಪ್ರಕಾಶ್, ಕುಲಸಚಿವರು (ಪರೀಕ್ಷಾಂಗ) | ಸದಸ್ಯರು |
| 16) | ಪ್ರೊ. ಆರ್.ಶಿವಪ್ಪ | ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿ |

**ವಿಶೇಷ ಆಹ್ವಾನಿತರು:**

17) ಡಾ. ಸಂಗೀತಾ ಗಜಾನನ್ ಭಟ್, ಹಣಕಾಸು ಅಧಿಕಾರಿಗಳು

**ಹಾಜರಾಗದ ಸದಸ್ಯರು:**

18) ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
19) ಡಾ. ಈ.ಸಿ.ನಿಂಗರಾಜ್ ಗೌಡ
20) ಡಾ. ಸೈಯದ್ ಕಾರುಖ ಮೊಹಿದ್ದೀನ್
21) ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
22) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
23) ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.

ಮೊದಲಿಗೆ ಮಾನ್ಯ ಕುಲಸಚಿವರು 102ನೇ ವಾರ್ಷಿಕ ಘಟಿಕೋತ್ಸದ ಅಂಗವಾಗಿ ಏರ್ಪಡಿಸಿರುವ ಸಿಂಡಿಕೇಟ್ ವಿಶೇಷ ಸಭೆಗೆ ಆಗಮಿಸಿರುವ ಎಲ್ಲಾ ಗೌರವಾನ್ವಿತ ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿದರು.

ತದನಂತರ, ಸನ್ಮಾನ್ಯ ಕುಲಪತಿಗಳು ಸಿಂಡಿಕೇಟ್ ವಿಶೇಷ ಸಭೆಗೆ ಆಗಮಿಸಿದ್ದ ಎಲ್ಲಾ ಸದಸ್ಯರುಗಳನ್ನು ಆಹ್ವಾನಿಸಿದರು ಮತ್ತು ಚರಿತ್ರಾರ್ಹವಾದ ಮೈಸೂರು ವಿಶ್ವವಿದ್ಯಾನಿಲಯದ 102ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಗೌರವ ಡಾಕ್ಟರೇಟ್ ಪದವಿಯನ್ನು ಮತ್ತು ವಿವಿಧ ಕೋರ್ಸುಗಳ ಪದವಿಗಳನ್ನು ಪ್ರದಾನಿಸುವ ಸಲುವಾಗಿ ವಿಶ್ವವಿದ್ಯಾನಿಲಯದ ಎಲ್ಲಾ ನಿಕಾಯಗಳ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಸಿದ್ಧಪಡಿಸಿ ಸಿಂಡಿಕೇಟ್ ವಿಶೇಷ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ ಎಂದು ತಿಳಿಸಿದರು.

| | |
|---|---|
| ವಿಶೇಷ ಸಭೆ 2022/1.1 | 102ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡುವ ಬಗ್ಗೆ. |
| ತೀರ್ಮಾನ | ಘನತೆವೆತ್ತ ಕುಲಾಧಿಪತಿಗಳ ಕಾರ್ಯದರ್ಶಿಯವರ ದಿನಾಂಕ: 25-02-2022 ಪತ್ರದನ್ವಯ 102ನೇ ವಾರ್ಷಿಕ ಘಟಿಕೋತ್ಸವದಲ್ಲಿ ಪದ್ಮವಿಭೂಷಣ ಡಾ. ವಾಸುದೇವ್ ಕೆ. ಆತ್ರೆ, ವಿಶ್ರಾಂತ ಮಹಾ ನಿರ್ದೇಶಕರು, ರಕ್ಷಣಾ ಸಂಶೋಧನಾ ಮತ್ತು ಅಭಿವೃದ್ಧಿ ಸಂಸ್ಥೆ, ದಿ. ಶ್ರೀ ಪುನೀತ್ ರಾಜಕುಮಾರ್ (ಮರಣೋತ್ತರ) ಖ್ಯಾತ ಚಲನಚಿತ್ರ ನಾಯಕ ನಟರು, ಗಾಯಕರು ಹಾಗೂ ಸಮಾಜ ಸೇವಕರು, ಶ್ರೀ ಎಂ.ಮಹಾದೇವಸ್ವಾಮಿ, ಖ್ಯಾತ ಜಾನಪದ ಕಲಾವಿದರು ಹಾಗೂ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು, ಇವರುಗಳಿಗೆ ಕ್ರಮವಾಗಿ D.Sc., D.Litt. (Posthumous). ಮತ್ತು D.Litt ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲು ಕುಲಾಧಿಪತಿಗಳು ಅನುಮೋದಿಸಿರುವುದನ್ನು ಸಿಂಡಿಕೇಟ್ ವಿಶೇಷ ಸಭೆಯು ಅನುಸಮರ್ಥಿಸಿತು. |
| ವಿಶೇಷ ಸಭೆ 2022/1.2 | 102ನೇ ವಾರ್ಷಿಕ ಘಟಿಕೋತ್ಸವದ ಅಭ್ಯರ್ಥಿಗಳ ಅರ್ಹತಾ ಪಟ್ಟಿಯನ್ನು ಅನುಮೋದಿಸುವ ಬಗ್ಗೆ. |
| ತೀರ್ಮಾನ | ವಿವಿಧ ಪದವಿಗಳನ್ನು 102ನೇ ವಾರ್ಷಿಕ ಘಟಿಕೋತ್ಸವದಲ್ಲಿ ಪ್ರದಾನಿಸುವ ಸಲುವಾಗಿ ಮಂಡಿಸಿರುವ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಸಿಂಡಿಕೇಟ್ ವಿಶೇಷ ಸಭೆಯಲ್ಲಿ ಸರ್ವಾನುಮತದಿಂದ ಅನುಮೋದಿಸಿತು. |

ಕೊನೆಯಲ್ಲಿ ಅಧ್ಯಕ್ಷರು ಎಲ್ಲರಿಗೂ ವಂದಿಸಿ, 102ನೇ ವಾರ್ಷಿಕ ಘಟಿಕೋತ್ಸವದ ಕಾರ್ಯಕ್ರಮವು ಯಶಸ್ವಿಯಾಗಿ ನೆರವೇರಲು ಎಲ್ಲಾ ಸದಸ್ಯರುಗಳು ಸಹಕರಿಸಬೇಕೆಂದು ಕೋರುತ್ತಾ, ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

ಕುಲಸಚಿವ ಹಾಗೂ ಸದಸ್ಯ ಕಾರ್ಯದರ್ಶಿ

ಕುಲಪತಿ ಹಾಗೂ ಅಧ್ಯಕ್ಷರು